ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

17

ಇಲಾಖೆ / ವಿಷಯ : DEPARTMENT / SUBJECT: ಗೃಹ - (ಸಿಐಡಿ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 25/1/12

## ಪ್ರಶ್ನೆ ಪತ್ರಿಕೆ ಸಿದ್ಧತೆ ವೇಳೆಯೇ ಸೋರಿಕೆ । ಕೆಪಿಎಸ್ಸಿಯ ಇಬ್ಬರು ಶಾಮೀಲು ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆ ನೀಡುವ ಬದಲು ಉತ್ತರ ಹೇಳುತ್ತಿದ್ದ ಖದೀಮರು

# ಪ್ರಶ್ನೆಯಲ್ಲ, ಉತ್ತರ ಲೀಕ್!

■ ವಿಕ ಸುದ್ದಿಲೋಕ ಬೆಂಗಳೂರು 25-1-12

ಪ್ರಥಮ ದರ್ಜೆ ಸಹಾಯಕ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಇಬ್ಬರು ಸಿಬ್ಬಂದಿ ಭಾಗಿಯಾಗಿರುವುದು ಸ್ಪಷ್ಟವಾಗಿದೆ.

ಅವರ ಪೈಕಿ ದ್ವಿತೀಯ ದರ್ಜೆ ಸಹಾಯಕ ರಮೇಶ್ ಹರಕಲ್ ನನ್ನು ಬಾಗಲಕೋಟೆಯಲ್ಲಿ ವಶಕ್ಕೆ ಪಡೆಯಲಾಗಿದೆ. ಇನ್ನೊಬ್ಬ ನೌಕರ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಸಿಐಡಿ ಬಲೆ ಬೀಸಿದೆ. ಬೀಳಗಿ ತಾಲೂಕಿನ ಬೂದಿಹಾಳ ಗ್ರಾಮದ ರಮೇಶ್ ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದಿನ ಪ್ರಮುಖ ರೂವಾರಿ ಎಂದು ಹೇಳಲಾಗುತ್ತಿದೆ. ಇದೀಗ ಬಂಧಿತರ ಸಂಖ್ಯೆ 6ರಿಂದ 14ಕ್ಕೇರಿದೆ.

ಈ ನಡುವೆ, ಖದೀಮರು ಪ್ರಶ್ನೆ ಪತ್ರಿಕೆಯನ್ನು ನೇರ ಅಭ್ಯರ್ಥಿಗಳಿಗೆ ನೀಡುವ ಬದಲು ಅವುಗಳ ಉತ್ತರಗಳನ್ನಷ್ಟೇ ಹೇಳುತ್ತಿದ್ದರು ಎಂಬ ಅಂಶ ಬೆಳಕಿಗೆ ಬಂದಿದೆ. ಪ್ರಮುಖ ಆರೋಪಿಗಳಾದ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ನೌಕರ ಚಂದ್ರು, ರಾಚಪ್ಪ ಅವರ ಬಳಿ 86 ಪ್ರಶ್ನೆಗಳ ಸಾಮಾನ್ಯ ಜ್ಞಾನ, 85 ಪ್ರಶ್ನೆಗಳ ಕನ್ನಡ ಭಾಷಾ ಪ್ರಶ್ನೆ ಪತ್ರಿಕೆ ದೊರೆತಿವೆ. ಈ ಪ್ರಶ್ನೆಗಳಿಗೆ ಉತ್ತರ ಬರೆದುಕೊಂಡಿದ್ದ ಆರೋಪಿ ಚಂದ್ರು, ತನ್ನ ಮನೆಯಲ್ಲಿ ರಾಚಪ್ಪನ ಜತೆ ಸೇರಿ ಹಣ ಕೊಟ್ಟಿರುವ ಅಭ್ಯರ್ಥಿಗಳಿಗೆ ಹೇಳುತ್ತಿದ್ದ. ಪ್ರಶ್ನೆ ಪತ್ರಿಕೆ ನೀಡುವ ಬದಲು ಇಂತಹ ಉತ್ತರ ಇದ್ದರೆ ಟಿಕ್ ಮಾಡಬೇಕು ಎಂದು ಸೂಚನೆ ನೀಡುತ್ತಿದ್ದರು. ಇದರಿಂದ ಪ್ರಶ್ನೆ ಪತ್ರಿಕೆ ಹೊರಗೆ ಬರುತ್ತಿರಲಿಲ್ಲ. ಅಭ್ಯರ್ಥಿಗಳು ಒಂದು ಉತ್ತರ ತಿಳಿದುಕೊಂಡಿದ್ದರೆ ಸಾಕಿತ್ತು. ಗೌಪ್ಯತೆ ಕಾಪಾಡಲು ಜಾಲತಾಣಗಳನ್ನು ಬಳಕೆ ಮಾಡುತ್ತಿರಲಿಲ್ಲ. ಬಂಧಿತರು ಶಿವಮೊಗ್ಗ, ತುರುವೇಕೆರೆ, ದೊಡ್ಡಬಳ್ಳಾಪುರ, ಬೆಳಗಾವಿ, ಅಥಣಿ, ಬೆಂಗಳೂರು, ಮೈಸೂರಿನವರಾಗಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆಗೆ ಕಠಿಣ ಶಿಕ್ಷೆಯಾಗಲಿ
ಸಂಪಾದಕೀಯ 08



ಕಳೆದ ವರ್ಷ ಮೇ ತಿಂಗಳಲ್ಲಿ ನಡೆಯಬೇಕಿದ್ದ ಪರೀಕ್ಷೆಯನ್ನು ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು. ಆರೋಪಿಗಳು ಹಲವು ತಿಂಗಳಿಂದಲೇ ಸೋರಿಕೆಗೆ ಪ್ಲ್ಯಾನ್ ಮಾಡಿದ್ದರು. ಪರೀಕ್ಷಾ ಕೇಂದ್ರ, ಸಾಗಣೆ, ಖಜಾನೆಯಲ್ಲಿಟ್ಟ ವೇಳೆ ಸೋರಿಕೆ ಕಷ್ಟ ಎಂಬುದನ್ನು ಅರಿತ ಆರೋಪಿಗಳು ಪ್ರಶ್ನೆಪತ್ರಿಕೆ ಸಿದ್ಧತೆಯ ಹಂತದಲ್ಲಿ ಲ್ಯಾಗಲೇ ಎಗರಿಸಲು ಪ್ಲ್ಯಾನ್ ರೂಪಿಸಿದ್ದರು. ಮೂಲ ಪ್ರಶ್ನೆ ಪತ್ರಿಕೆ ಅಥವಾ ಜೆರಾಕ್ಸ್ ಪ್ರತಿ ಆರೋಪಿಗಳ ಬಳಿ ಸಿಕ್ಕಿಲ್ಲ. ಬದಲಿಗೆ ಪ್ರಶ್ನೆಗಳನ್ನು ಟೈಪ್ ಮಾಡಿಕೊಳ್ಳಲಾಗಿದೆ. ಉತ್ತರಗಳನ್ನು ಕೈಯಿಂದ ಬರೆಯಲಾಗಿದೆ.

### ಕೆಪಿಎಸ್‌ಸಿಗೆ ನೋಟಿಸ್

ಪ್ರಕರಣಕ್ಕೆ ಸಂಬಂಧಿಸಿದಂತೆ ಶೀಘ್ರದಲ್ಲೇ ಕೆಪಿಎಸ್‌ಸಿ ಕಾರ್ಯದರ್ಶಿ ಸೇರಿದಂತೆ ಸಂಬಂಧಿತರಿಗೆ ನೋಟಿಸ್ ನೀಡಿ ಮಾಹಿತಿ ಪಡೆದುಕೊಳ್ಳಲಾಗುತ್ತದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಠಾಣಾ ಚಂದ್ರು ಮತ್ತು ರಾಚಪ್ಪ ಮತ್ತಿತರ ಆರೋಪಿಗಳ ಬಂಧನದ ಬಳಿಕ ಪ್ರಧಾನ ರೂವಾರಿ, ಕೆಪಿಎಸ್ಸಿ ಎಸ್‌ಡಿಎ ರಮೇಶ್ ತಲೆಮರೆಸಿಕೊಂಡಿದ್ದ. ಆತ ಬಾಗಲಕೋಟೆಯ ಬೂದಿಹಾಳದಲ್ಲಿರುವ ಮನೆಗೆ ಹೋಗಿರುವ ಮಾಹಿತಿ ಪಡೆದ ಸಿಐಡಿ ಪೊಲೀಸರು ಅಲ್ಲಿಗೆ ಧಾವಿಸಿದ್ದರು. ಅಲ್ಲಿಂದ ಆತ ಚಿಕ್ಕಪಡಸಲಗಿಗೆ ಹೋಗಿರುವ ಮಾಹಿತಿ ತಿಳಿದು ಅಲ್ಲಿಗೆ ಹೋಗಿ ಬಂಧಿಸಿದ್ದರು. ಇದೀಗ ಆತನನ್ನು ಬೆಂಗಳೂರಿಗೆ ಕರೆತರಲಾಗಿದೆ.

### ಅಭ್ಯರ್ಥಿಗಳೂ ಅರೆಸ್ಟ್

ಬಂಧಿತರಲ್ಲಿ ಹಣ ಕೊಟ್ಟು ಪರೀಕ್ಷೆ ಬರೆದು ಕೆಲಸ ಗಿಟ್ಟಿಸಿಕೊಳ್ಳಲು ಯೋಜಿಸಿದ್ದ ಅಭ್ಯರ್ಥಿಗಳು ಕೂಡಾ ಇದ್ದಾರೆ. ಆರೋಪಿಗಳಿಂದ 35 ಲಕ್ಷ ರೂ., ನಾಲ್ಕು ಕಾರು ವಶಪಡಿಸಿಕೊಳ್ಳಲಾಗಿದೆ. ಬಂಧಿತ 14 ಆರೋಪಿಗಳನ್ನು ನ್ಯಾಯಾಧೀಶರ ಎದುರು ಹಾಜರು ಪಡಿಸಿದ ಸಿಐಡಿ ತನಿಖಾಧಿಕಾರಿ ವೇಣುಗೋಪಾಲ್ ಅವರು ಆರೋಪಿ ಚಂದ್ರುನನ್ನು ಹೆಚ್ಚಿನ ವಿಚಾರಣೆಗಾಗಿ 10 ದಿನಗಳ ವಶಕ್ಕೆ ಪಡೆದಿದ್ದಾರೆ. ಉಳಿದವರನ್ನು ಜೈಲಿಗೆ ಕಳುಹಿಸಲಾಗಿದೆ.

ಕೆಪಿಎಸ್‌ಸಿ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ರಾತ್ರಿಯೇ ಮಾಹಿತಿ ಪಡೆದಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತು ಅಥವಾ ಅಗತ್ಯ ಬಿದ್ದರೆ ಹುದ್ದೆಯಿಂದ ವಜಾ ಮಾಡಲಾಗುವುದು.

- ಬಿ.ಎಸ್. ಯಡಿಯೂರಪ್ಪ ಸಿಎಂ